(ಸಾಕ್ಷಿಗೆ ದಿನಾಂಕ: 10.09.2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆಃ ಸ್ವತಃ ಸಾಕ್ಷಿಯಿಂದಃ**

ಈ ದಿನ ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯಾಗಿ ಮಧ್ಯಂತರ ಅರ್ಜಿಯೊಂದಿಗೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ತುಮಕೂರು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದ ಮುನಿಸಿಪಲ್ ಅಪೀಲ್ ಸಂಖ್ಯೆ 3/2016-17 ರಲ್ಲಿನ ಮೇಲ್ಮನವಿ ಅರ್ಜಿಯ ದೃಢೀಕೃತ ನಕಲನ್ನು, ಸದರಿ ಅಪೀಲಿನಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯ ದೃಢೀಕೃತ ನಕಲನ್ನು, ನಮೂನೆ-11(ಸಿ) ನೋಟಿಸಿನ ದೃಢೀಕೃತ ನಕಲನ್ನು ತತ್ಕಾಲ್ ಪೋಡಿ ಅರ್ಜಿಯ ದೃಢೀಕೃತ ನಕಲನ್ನು, ದಿನಾಂಕಃ 23/04/2012ರಂದು 2ನೇ ವಾದಿ ತಹಸೀಲ್ದಾರ್ ರವರಿಗೆ ನೀಡಿದ ತಕರಾರಿನ ದೃಢೀಕೃತ ನಕಲನ್ನು, 3ನೇ ವಾದಿ ತಹಸೀಲ್ದಾರ್ ರವರಿಗೆ ನೀಡಿದ ತಕರಾರಿನ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ದಾಖಲೆಗಳನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿ.ಡಿ.10 ರಿಂದ ನಿ.ಡಿ.15 ಎಂದು ಗುರುತಿಸಲಾಯಿತು.

ಕುಣಿಗಲ್ ಕಿರಿಯ ಸಿವಿಲ್ ನ್ಯಾಯಾಲಯದ ಮೂಲ ದಾವೆ ಸಂಖ್ಯೆ 59/2012ರಲ್ಲಿನ ವಾದ ಪತ್ರದ ದೃಢೀಕೃತ ನಕಲನ್ನು, ಸದರಿ ದಾವೆಯಲ್ಲಿನ ಮಧ್ಯಂತರ ಅರ್ಜಿಯ ದೃಢೀಕೃತ ನಕಲನ್ನು, ಸದರಿ ದಾವೆಯಲ್ಲಿ ಸಲ್ಲಿಸಿದ ಸಿಪಿಸಿ ಕ್ರಮಾದೇಶ 39 ನಿಯಮ 1 ಮತ್ತು 2 ರಲ್ಲಿ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು, ಸಿಪಿಸಿ ಕ್ರಮಾದೇಶ 32 ನಿಯಮ 4 ರಲ್ಲಿ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು, ಸದರಿ ದಾವೆಯಲ್ಲಿ

ಸಲ್ಲಿಸಿದ ಮತ್ತೊಂದು ಸಿಪಿಸಿ ಕ್ರಮಾದೇಶ 39 ನಿಯಮ 1 ಮತ್ತು 2 ರಲ್ಲಿ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು, ದಿನಾಂಕಃ 15/03/2019ರಂದು ಕುಣಿಗಲ್ ತಹಸೀಲ್ದಾರ್ ರವರು ನೀಡಿದ ಹಿಂಬರಹವನ್ನು, ದಿನಾಂಕಃ 20/07/2011ರಂದು ಕುಣಿಗಲ್ ತಹಸೀಲ್ದಾರ್ ರವರು ಹೊರಡಿಸಿದ ಆದೇಶದ ದೃಢೀಕೃತ ನಕಲನ್ನು ಹಾಗೂ ಭೂಮಾಪಕರ ಸಮಕ್ಷಮ ನೀಡಲಾದ ಹೇಳಿಕೆಯ ದೃಢೀಕೃತ ನಕಲುಗಳನ್ನು ಹಾಜರುಪಡಿಸುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ದಾಖಲೆಗಳನ್ನು ಅನುಕ್ರಮವಾಗಿ ನಿ.ಡಿ.16 ರಿಂದ ನಿ.ಡಿ.22 ಎಂದು ಗುರುತಿಸಲಾಗಿದ್ದು, ಸದರಿ ದಾಖಲೆಗಳ ಪೈಕಿ ನಿ.ಡಿ.20 ರಿಂದ ನಿ.ಡಿ.22 ದಾಖಲೆಗಳನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

***ಆದ್ದರಿಂದ ನಾನು ಕೋರಿರುವಂತೆ ಈ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.***

**ಪಾಟೀ ಸವಾಲುಃ ಶ್ರೀ ಎ.ಆರ್.ಆರ್., ವಾದಿ ಪರ ವಕೀಲರಿಂದಃ**

ಮೂಲ ದಾವೆ ಸಂಖ್ಯೆ 59/2012ರಲ್ಲಿ ನಾನು ಮತ್ತು ನನ್ನ ಕುಟುಂಬದ ಸದಸ್ಯರು ಪಕ್ಷಗಾರರಾಗಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಸಲ್ಲಿಸಿದ ಪ್ರತಿವಾದ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ನೆನಪಿರುವುದಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಲಾಗಿದೆಯೇ ಎಂದರೆ ನನಗೆ ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಹ ಮುಂದುವರೆದು ಸದರಿ ದಾವೆಯಲ್ಲಿ ನಾವು ವಾದಿಗಳಾಗಿರುತ್ತೇವೆ ಎಂದು ನುಡಿಯುತ್ತಾರೆ. ಮೂಲ ದಾವೆ ಸಂಖ್ಯೆ

59/2012ರಲ್ಲಿ ಸದರಿ ದಾವೆಯ ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ನನಗೆ ನೆನಪಿರುವುದಿಲ್ಲ. ಮೂಲ ದಾವೆ ಸಂಖ್ಯೆ 59/2012ರ ದಾವೆಯನ್ನು ನಾವು ಹಿಂಪಡೆದಿರುತ್ತೇವೆ ಎಂದರೆ ಸರಿ. ನಮ್ಮ ಎದುರುದಾರರು ಅಸಲು ದಾವೆ 230/2012ರಂತೆ ದಾವೆ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಸಲ್ಲಿಸಿದ ವಾದ ಪತ್ರವನ್ನು ಅವರು ಹಿಂಪಡೆದಿರುತ್ತಾರೆ ಎಂದರೆ ಸರಿ.

2012ನೇ ಸಾಲಿನಲ್ಲಿ ನಮ್ಮ ಮತ್ತು ಪ್ರತಿವಾದಿಯರ ಸ್ವತ್ತನ್ನು ಅಳತೆ ಮಾಡಲು ತತ್ಕಾಲ್ ಪೋಡಿಗೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ಅರ್ಜಿ ವಜಾಗೊಂಡ ನಂತರ ನಿ.ಡಿ.13ರಂತೆ ಅರ್ಜಿ ನೀಡಿರುತ್ತೇನೆ ಎಂದರೆ ಸರಿ. ನಿ.ಡಿ.10 ರಿಂದ 15 ಹಾಗೂ ನಿ.ಡಿ.20 ರಿಂದ 22 ದಾಖಲೆಗಳ ಕುರಿತು ಪ್ರಸ್ತುತ ದಾವೆಯ ನಮ್ಮ ಪ್ರತಿವಾದ ಪತ್ರದಲ್ಲಿ ನಾವು ಹೇಳಿರುವುದಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ನಮ್ಮ ಮತ್ತು ಪ್ರತಿವಾದಿಗಳ ಸ್ವತ್ತನ್ನು ಅಳತೆ ಮಾಡಲು ಕಮಿಷನರ್ ನೇಮಿಸಲು ನಾನೇ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಸ್ವತಹ ಮುಂದುವರೆದು ಈ ಬಗ್ಗೆ ಅಸಲು ದಾವೆ ಸಂಖ್ಯೆ 230/2012ರಲ್ಲಿಯೂ ಅರ್ಜಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನನ್ನ ಅರ್ಜಿಯನ್ನು ಪುರಸ್ಕರಿಸಿ ನರಸೇಗೌಡ ಎಂಬುವವರನ್ನು ಕಮಿಷನರ್ ಆಗಿ ನೇಮಿಸಲಾಗಿತ್ತು ಎಂದರೆ ಸರಿ. ಸದರಿ ನರಸೇಗೌಡ ಎರಡು ಬಾರಿ ಅಳತೆ ಮಾಡಿರುವ ಬಗ್ಗೆ ಎರಡು ವರದಿಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರದಿಗೆ ವಾದಿಯರು ಹಾಗೂ ಪ್ರತಿವಾದಿಯರು ಇಬ್ಬರೂ ತಕರಾರು ಸಲ್ಲಿಸಿ ಕಮಿಷನರ್ ರವರನ್ನು ಇಬ್ಬರೂ ಪಾಟೀ ಸವಾಲು ಮಾಡಿರುತ್ತೇವೆ ಎಂದರೆ ಸರಿ.

ಸದರಿ ಕಮಿಷನರ್ ವರದಿಗಳು ದೋಷದಿಂದ ಕೂಡಿರುತ್ತವೆ ಎಂದು ಕಮಿಷನರ್ ರವರೇ ನ್ಯಾಯಾಲಯದಲ್ಲಿ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಅದಾದ ನಂತರ ವಾದಿಯರು ಹಿಂದಿನ ಕಮಿಷನರ್ ವರದಿಯನ್ನು ತಿರಸ್ಕರಿಸಿ ಮತ್ತೊಂದು ಕಮಿಷನರ್ ರವರನ್ನು ನೇಮಿಸುವಂತೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಗಳು ಇನ್ನೂ ವಿಲೆಯಾಗಿರುವುದಿಲ್ಲ ಎಂದರೆ ಸರಿ.

ಕಮಿಷನರ್ ರವರ ದಿಕ್ಕನ್ನು ತಪ್ಪಿಸುವ ದುರುದ್ದೇಶದಿಂದ ನಿ.ಡಿ.10 ರಿಂದ 15 ಹಾಗೂ ನಿ.ಡಿ.20 ರಿಂದ 22 ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ, ನಿ.ಡಿ.21ರಲ್ಲಿ ತತ್ಕಾಲ್ ಪೋಡಿಗೆ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ನಂತರ ಅರ್ಜಿ ಸಲ್ಲಿಸಲು ತಿಳಿಸಿ ಆದೇಶವಾಗಿರುತ್ತದೆ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಈ ದಿನ ಹಾಜರುಪಡಿಸಿದ ದಾಖಲೆಗಳು ಸುಳ್ಳು ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.